# ಯುವವೇದಿಕೆ

# ಯುವಸ್ಪಂದನ

## ನಮ್ಮ ಪ್ರಶ್ನೆಗಳಿಗೆ ನಿಮ್ಮ ಉತ್ತರ

(*ಕಳೆದ ಸಂಚಿಕೆಯಿಂದ ಮುಂದುವರೆದುದು*)

**ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅಗತ್ಯವೆ ? ಹಾಗಾದರೆ ಎಂಥ ಬದಲಾವಣೆ ಅಗತ್ಯ ?**

ವಿದ್ಯಾರ್ಥಿಗಳು ತಮ್ಮ ಜೀವನವನ್ನು ಸದ್ವರ್ತನೆಯಿಂದ ಸ್ವಂತವಾಗಿ ರೂಪಿಸಿಕೊಳ್ಳುವಂತಿರಬೇಕು, ಉತ್ತಮ ವ್ಯಕ್ತಿತ್ವದ ಸತ್‌ಪ್ರಜೆಗಳಾಗಬೇಕು. ದೇಶದ ಸೇವೆಯನ್ನು ಮಾಡಬೇಕೆಂಬ ಅಭಿಲಾಷೆಯು ಅವರಲ್ಲಿ ಮೂಡುವಂತೆ ಮಾಡಬೇಕು. ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಶಾಲೆಗಳ ಜೊತೆಗೆ ಮನೆಪಾಠಗಳನ್ನು ಅವಲಂಬಿಸಬೇಕಾಗಿದೆ. ಈ ಪಿಡುಗು ಮೊದಲು ತೊಲಗಬೇಕು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗಿಂತ ಶಿಕ್ಷಕರಿಗೆ ಮೊದಲು ತರಬೇತಿ ಕೊಡಬೇಕು.

ಇಂದಿನ ಪಠ್ಯಪುಸ್ತಕಗಳನ್ನು ಪರೀಕ್ಷೆಯ ದೃಷ್ಟಿಯಿಂದ ಯಾಂತ್ರಿಕವಾಗಿ ಓದದೆ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ರೀತಿಯಲ್ಲಿ ವಿಷಯವನ್ನು ಗ್ರಹಿಸುವಂತಾಗಬೇಕು. ಶಿಕ್ಷಕರು ಪುಸ್ತಕವನ್ನು ಓದಿ ಬರೀ ಅರ್ಥಗಳನ್ನು ಮಾತ್ರ ಬೋಧಿಸದೆ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮೌಲ್ಯಗಳನ್ನು ಬೋಧಿಸುವ ಸಾಮರ್ಥ್ಯ ಹೊಂದಿರಬೇಕು. ವಿದ್ಯಾರ್ಥಿಗಳು ವೈಜ್ಞಾನಿಕವಾಗಿ, ಬೌದ್ಧಿಕವಾಗಿ, ಶಾರೀರಿಕವಾಗಿ, ಮಾನಸಿಕವಾಗಿ ನೈತಿಕವಾಗಿ ಮುಂದುವರಿಯಬೇಕೆಂದರೆ ಶಿಕ್ಷಣದಿಂದ ಮಾತ್ರ ಸುಲಭಸಾಧ್ಯವಾಗುತ್ತದೆ. ದೇಶದ ಬೆಳವಣಿಗೆ, ವ್ಯಕ್ತಿತ್ವದ ಹಾಗೂ ನೈತಿಕತೆಯ ಬೆಳವಣಿಗೆಗಳೆಲ್ಲವೂ ಉತ್ತಮ ಶಿಕ್ಷಣ ಪದ್ಧತಿಯಿಂದ ಮಾತ್ರ ಸಾಧ್ಯವಾಗುತ್ತದೆ.

—ಪಲ್ಲವಿ. ಎನ್., ಪ್ರಥಮ ಬಿ.ಎ., ಜೆ.ಎಸ್.ಎಸ್.
ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು.

ಹೌದು. ಬದಲಾವಣೆ ಅಗತ್ಯ. ಮಾನವೀಯ ಮೌಲ್ಯ ಎತ್ತಿ ಹಿಡಿಯುವ ಶಿಕ್ಷಣ ಬೇಕು. ಈಗಿನ ವಿದ್ಯೆಯಿಂದ ವಿದ್ಯಾರ್ಥಿಗಳಿಗೆ ಅವರ ಮುಂದಿನ ಜೀವನಕ್ಕೆ ಉತ್ತಮ ಮಾರ್ಗ ದೊರೆಯದೆ ಕೆಲವರು ನಿರುದ್ಯೋಗಿಗಳಾಗಿ ತಾವೂ ಕಷ್ಟ ಪಟ್ಟು ಸಮಾಜಕ್ಕೂ ಕಂಟಕರಾಗುತ್ತಾರೆ. ಈ ರೀತಿಯಾಗದಿರುವುದಕ್ಕೆ ಇಂದಿನ ಯುವ ಪೀಳಿಗೆಗೆ ಸಮಾಜದಲ್ಲಿ ಉತ್ತಮವಾಗಿ ಬದುಕಲು ಔದ್ಯೋಗಿಕ ವಿದ್ಯಾಭ್ಯಾಸ ಬೇಕು.

ಪ್ರೌಢ ಶಿಕ್ಷಣದ ಮೂಲಕ ವಿದ್ಯಾರ್ಥಿಗಳಿಗೆ ಮುಂದಿನ ಭಾವೀ ಜೀವನದ ಅನುಕೂಲಕ್ಕಾಗಿ ವೃತ್ತಿಪರ ಶಿಕ್ಷಣ, ವ್ಯಾಪಾರ ಶಿಕ್ಷಣ, ಔದ್ಯೋಗಿಕ ಶಿಕ್ಷಣ, ಗ್ರಾಮೀಣ ಬದುಕಿನಲ್ಲಿ ಸಹಾಯಕವಾಗುವಂತೆ ಗುಡಿಕೈಗಾರಿಕೆಗಳ ಶಿಕ್ಷಣ, ವಿಜ್ಞಾನದ ಶಿಕ್ಷಣ ಮತ್ತು ಅತ್ಯಾಧುನಿಕ ತಾಂತ್ರಿಕ ಶಿಕ್ಷಣಗಳನ್ನು ವಿದ್ಯಾರ್ಥಿಗಳ ಜ್ಞಾನಶಕ್ತಿ ಮತ್ತು ಅವರ ಬಯಕೆಯ ರೀತಿಯಲ್ಲಿ ನೀಡಬೇಕು. ಉನ್ನತ ಶಿಕ್ಷಣ, ವಾಣಿಜ್ಯ ಅಭಿವೃದ್ಧಿಯ ಉನ್ನತ ಶಿಕ್ಷಣ, ರೈತರಿಗಾಗಿ ವ್ಯವಸಾಯಕ್ಕೆ ಸಂಬಂಧಪಟ್ಟ ಮೂಲಶಿಕ್ಷಣ ಮತ್ತು ಅತ್ಯಾಧುನಿಕ ಬೆಳೆ ರಕ್ಷಣೆ, ಕೀಟ ರಕ್ಷಣೆ, ಮಣ್ಣಿನ ಫಲವತ್ತತೆಯ ರಕ್ಷಣೆ ಇವುಗಳಿಗೆ ಸಂಬಂಧಪಟ್ಟ ವ್ಯವಸಾಯ ಶಿಕ್ಷಣ, ಜೊತೆಗೆ ಧಾರ್ಮಿಕ ಆಧ್ಯಾತ್ಮಿಕ ಶಿಕ್ಷಣವೂ ಬೇಕು.

—ಜಿ.ಎಸ್. ನಾಗಲಕ್ಷ್ಮಿ, ದ್ವಿತೀಯ ಬಿ.ಎಸ್ಸಿ.,
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು.

ಹೌದು, ಇಂದಿನ ಶಿಕ್ಷಣ ಪದ್ಧತಿಯಲ್ಲಿ ಖಂಡಿತವಾಗಿಯೂ ಬದಲಾವಣೆಯ ಅಗತ್ಯವಿದೆ.

❊ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಮೊಟ್ಟಮೊದಲು ಭದ್ರವಾದ ತಳಪಾಯ ಅತ್ಯಾವಶ್ಯಕವಾಗಿ ಬೇಕಾಗಿದೆ.

❊ ಮಕ್ಕಳಲ್ಲಿ ಪ್ರೀತಿ, ಕಲಿಸುವಿಕೆಯಲ್ಲಿ ಉತ್ಸಾಹವಿರುವ ಮತ್ತು ಮಕ್ಕಳ ಮಟ್ಟಕ್ಕಿಳಿದು ಅವರಿಗೆ ಅರ್ಥವಾಗುವ ರೀತಿಯಲ್ಲಿ ಬೋಧಿಸುವ ಉತ್ತಮ ಜ್ಞಾನವನ್ನು ಹೊಂದಿರುವ ಶಿಕ್ಷಕರುಗಳನ್ನು ಪ್ರಾಥಮಿಕ ಶಾಲೆಗಳಿಗೆ ನೇಮಕಾತಿ ಮಾಡಬೇಕು.

❊ ಶಿಕ್ಷಕರು ಪಾಠ ಮಾಡುವಾಗ ಮಕ್ಕಳಲ್ಲೇ ಪ್ರಶ್ನೆ ಉದ್ಭವವಾಗುವಂತೆ ಮಾಡಿ ಅವರಿಂದಲೇ ಅದಕ್ಕೆ ಉತ್ತರ ಹೇಳಿಸಬೇಕು.

❊ ಅಪ್ರಯೋಜಕ ಪುಸ್ತಕಗಳ ಹೊರೆಯನ್ನು ಕಡಿತಗೊಳಿಸಬೇಕು.

❊ ಶಿಕ್ಷಣವು ವಿದ್ಯಾರ್ಥಿಗಳ ಸರ್ವಾಂಗೀಣ (ದೈಹಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ) ವಿಕಾಸಕ್ಕೆ ದಾರಿ ಮಾಡಿಕೊಡುವಂತಿರಬೇಕು.

❊ ಶಿಕ್ಷಣವು ಕೇವಲ ಹೊಟ್ಟೆ ಪಾಡಿಗೋಸ್ಕರವಾಗಿರದೆ, ಮಾನವನನ್ನು ಮಾಧವನನ್ನಾಗಿಸುವಂತಿರಬೇಕು.

❊ ಶುದ್ಧ ಚಾರಿತ್ರ್ಯ ಸಂಪನ್ನರನ್ನಾಗಿಸುವ ಮತ್ತು ಸ್ವತಃ ತನ್ನ ಕಾಲ ಮೇಲೆ ನಿಲ್ಲಲು ಸಹಾಯ ಮಾಡುವ ಶಿಕ್ಷಣ ಅತ್ಯಾವಶ್ಯಕವಾಗಿ ಬೇಕು.

❊ 'ಜ್ಞಾನಾರ್ಜನೆ' ಶಿಕ್ಷಣದ ಮುಖ್ಯ ಉದ್ದೇಶವಾಗಬೇಕು.

❊ ವಿದ್ಯಾಸಂಸ್ಥೆಗಳು ಕೇವಲ ದುಡ್ಡು ಮಾಡುವ ವ್ಯಾಪಾರೀ ಸಂಸ್ಥೆಗಳಾಗದೆ, ಇಂದಿನ ಮಕ್ಕಳನ್ನು ನಾಳೆಯ ಉತ್ತಮ ನಾಗರಿಕರನ್ನಾಗಿ ಮಾಡುವಲ್ಲಿ ಶ್ರಮ ವಹಿಸಬೇಕು.

> ನಿಜವಾದ ಶಿಕ್ಷಣವೆಂದರೆ ಬಾಲಕ ಬಾಲಕಿಯರ ಅಂತರ್ಯದಿಂದ ಅತ್ಯುತ್ತಮವಾದುದನ್ನು ಹೊರತರುವುದು. ವಿವೇಚನೆಯಿಲ್ಲದೆ ಬೇಕಾದ ಬೇಡವಾದ ಎಲ್ಲ ಬಗೆಯ ಮಾಹಿತಿಗಳನ್ನು ವಿದ್ಯಾರ್ಥಿಗಳ ತಲೆಗೆ ತುಂಬಿಸುವುದರಿಂದ ಇದು ಖಂಡಿತ ಸಾಧ್ಯವಾಗುವುದಿಲ್ಲ. ಈ ಮಾಹಿತಿ ಅನವಶ್ಯಕ ಹೊರೆಯಾಗಿ ಎಲ್ಲ ಸ್ವಂತಿಕೆಯನ್ನೂ ನಾಶಮಾಡುತ್ತದೆ ಮತ್ತು ವಿದ್ಯಾರ್ಥಿಗಳನ್ನು ಕೇವಲ ಯಂತ್ರಗಳಾಗಿ ಮಾರ್ಪಡಿಸುತ್ತದೆ.
>
> —ಮಹಾತ್ಮಾ ಗಾಂಧಿ

ಮೇಲೆ ತಿಳಿಸಿದ ಎಲ್ಲಾ ಅಂಶಗಳು ಕಾರ್ಯರೂಪಿತವಾದರೆ, (ಇಂದಿನ) ಶಿಕ್ಷಣದಲ್ಲಿ ಖಂಡಿತವಾಗಿ ನಿಧಾನವಾಗಿಯಾದರೂ ಬದಲಾವಣೆಯನ್ನು ಅಪೇಕ್ಷಿಸಬಹುದು.

— ಎಂ. ಶೀಲ. ಬಿ.ಎ., ನಂ.೬೬೯, ೨ನೇ ಹಂತ, 'ಎಂ' ಬ್ಲಾಕ್, ನೃಪತುಂಗ ರಸ್ತೆ, ಕುವೆಂಪು ನಗರ, ಮೈಸೂರು - ೨೩.

ಖಂಡಿತ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅತ್ಯಗತ್ಯ. 'ಶಿಕ್ಷಣ' ವ್ಯಕ್ತಿಯ ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿಗೆ ಅಮೂಲ್ಯವಾದ ವರವಿದ್ದಂತೆ. ಇಂತಹ ಪ್ರಭಾವೀ ಪೂರ್ಣ ಪದ್ಧತಿಯಲ್ಲಿಂದು ಕೆಲವು ಬದಲಾವಣೆಗಳು ಆಗಬೇಕಿದೆ. ಇಂದಿನ ಬಹುಪಾಲು ಯುವಕರಲ್ಲಿ—ವಿದ್ಯಾರ್ಥಿಗಳಲ್ಲಿ, ಅಗತ್ಯವಾದ ಜೀವನಮೌಲ್ಯಗಳು, ನೈತಿಕ ಗುಣಗಳು, ಮನುಷ್ಯತ್ವ ಪ್ರಜ್ಞೆಯ ಭಾವನೆಗಳು ಕಣ್ಮರೆಯಾಗುತ್ತಿವೆ. ಇದರ ಪರಿಣಾಮ ವೈಯಕ್ತಿಕ ಜೀವನಗಳ ನಾಶ ಮಾತ್ರವಲ್ಲ, ಇಡೀ ಸಮಾಜದ ನಾಶ. ಇದಕ್ಕೆ ಮೂಲಕಾರಣ 'ಉತ್ತಮ ಶಿಕ್ಷಣದ ಕೊರತೆ' ಎಂಬುದು ನಿಜವೆನಿಸುತ್ತದೆ.

ಈಗಿನ ಶಿಕ್ಷಣ ಪದ್ಧತಿಯಲ್ಲಿ ಆಗಬೇಕಾದ ಕೆಲವು ಬದಲಾವಣೆಗಳೆಂದರೆ,

**(1) ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣದ ಕಡ್ಡಾಯ ಜಾರಿ:**

ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ಎಂಬ ಮಾತು ಇಂದು ಬರೀ ಕಾಟಾಚಾರವಾಗಿ ಉಳಿದಿರುವುದು ಒಂದು ವಿಪರ್ಯಾಸ. ಇದನ್ನು ಕಾನೂನಿನ ರೀತ್ಯಾ ಜಾರಿಗೆ ತರಬೇಕು. ಇಂಗ್ಲಿಷ್ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಕೊಡುತ್ತಿರುವ ಶಾಲೆಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಮಾತೃಭಾಷಾ ಶಿಕ್ಷಣ ಮಕ್ಕಳಿಗೆ ತಮ್ಮ 'ನೈಜ ನೆಲೆಗಟ್ಟ'ನ್ನು ತೋರಿಸುತ್ತದೆ. ಇದರಿಂದ ಅವರಲ್ಲಿ ನಿಷ್ಕಲ್ಮಷ ಭಾಷಾಭಿಮಾನ, ಆ ಮೂಲಕ ರಾಷ್ಟ್ರಾಭಿಮಾನ ಮೂಡುತ್ತದೆ.

**(2) ಮೌಲ್ಯಾಧಾರಿತ ಶಿಕ್ಷಣ ಸೇರ್ಪಡೆಗೆ ಆದೇಶ :**

ಇಂದು ಇರುವ (ಕೆಲವು) ನೀರಸ ಪಠ್ಯಕ್ರಮಗಳನ್ನು ತೆಗೆದು, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನೊಳಗೊಂಡ ಶಿಕ್ಷಣವನ್ನು ಬೋಧಿಸುವಂತಾಗಬೇಕು. ಇದರ ಜೊತೆಯಲ್ಲೇ ವೇಗಯುತವಾಗಿ ಮುನ್ನುಗ್ಗುತ್ತಿರುವ ಪ್ರಪಂಚದಲ್ಲಿ ಕ್ಷಣ ಕ್ಷಣಕ್ಕೂ ಬದಲಾವಣೆಗಳು ಆಗುತ್ತಿರುವುದರಿಂದ ಅದಕ್ಕೆ ತಕ್ಕಂತೆ ಪರಿಷ್ಕರಣೆ ಶಿಕ್ಷಣದಲ್ಲೂ ನಡೆಯಬೇಕು. ಬದಲಾವಣೆಗೆ ತಕ್ಕಂತೆ ಸ್ಪಂದನವಿದ್ದರೆ ಮಾತ್ರ ಬೆಳವಣಿಗೆ ಸಾಧ್ಯ.

**(3) ನಿಷ್ಠ-ಪ್ರಭಾವೀ ಶಿಕ್ಷಕರ ನೇಮಕವಾಗಬೇಕು :**

ದೇಶಕ್ಕೆ ಉತ್ತಮ ಪ್ರಜೆಗಳ ಕೊಡುಗೆಯಲ್ಲಿ ಶಿಕ್ಷಕರ ಪಾತ್ರ ಅಪಾರ. ಇಂತಹ ಪ್ರಭಾವೀ ಶಿಕ್ಷಕರ ಕೊರತೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಇದೆ. ಈಗಿನ ಶಿಕ್ಷಕರಿಂದ ವಿದ್ಯೆ ಕಲಿತ ವಿದ್ಯಾರ್ಥಿ ಎಂಥ ಸಮಾಜ ನಿರ್ಮಿಸಬಲ್ಲ? ಇಂದು ಎಲ್ಲ ಕ್ಷೇತ್ರಗಳಲ್ಲೂ ವಿಷದಂತೆ ಪಸರಿಸುತ್ತಿರುವುದು 'ಭ್ರಷ್ಟಾಚಾರ'. ಈ ವಿಷ ಶಿಕ್ಷಣ ಕ್ಷೇತ್ರವನ್ನೂ ಆವರಿಸುತ್ತಿರುವುದು ಅಪಾಯಕರವಾದುದು. ಆದ್ದರಿಂದ ಶಿಕ್ಷಕ ನೇಮಕಾತಿಯಲ್ಲಿ ಅಂಕಪಟ್ಟಿಗೇ ಮಾರುಹೋಗದೆ 'ಬೌದ್ಧಿಕ ಮಟ್ಟ'ದ ಪರೀಕ್ಷೆಗೆ ಹೆಚ್ಚು ಒತ್ತು ಕೊಡಬೇಕು.

**(4) ವಿದ್ಯಾರ್ಥಿಯ ಕಾರ್ಯಕ್ಷೇತ್ರ ವಿಶಾಲವಾಗಬೇಕು :**

ವಿದ್ಯಾರ್ಥಿ ಒಂದೇ ಕ್ಷೇತ್ರಕ್ಕೆ ಸೀಮಿತವಾಗಿರಬಾರದು (ಉದಾ: ಕಲೆ, ವಿಜ್ಞಾನ ಮುಂತಾದವು). ಇದರಿಂದ ವಿದ್ಯಾಭ್ಯಾಸ ಪಡೆದಂತೆಲ್ಲಾ ವಿದ್ಯಾರ್ಥಿಯು ಜೀವನಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳಿಂದ ದೂರವಾಗುತ್ತಾನೆ. ಅದಕ್ಕಾಗಿ ಆದಷ್ಟು ಎಲ್ಲ ವಿಷಯಗಳನ್ನು ಗ್ರಹಿಸುವಂತಿರಬೇಕು. ಎಲ್ಲ ವಿಷಯಗಳಲ್ಲೂ ತಿಳುವಳಿಕೆ ಇರುವ ವಿದ್ಯಾರ್ಥಿಯೇ ನಿಜವಾದ ವಿದ್ಯಾರ್ಥಿ.

—ಮಂಜುನಾಥ. ಕೆ, ತೃತೀಯ ಬಿ.ಎ.,
ಮಹಾರಾಜ ಕಾಲೇಜು

ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅಗತ್ಯವಿದೆ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ಚೆನ್ನಾಗಿ ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಹತ್ವವಿರುವುದಿಲ್ಲ. ಉನ್ನತ ಮಟ್ಟದ ಶಾಲಾ ಕಾಲೇಜುಗಳಲ್ಲಿ, ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಿಂತ ಶ್ರೀಮಂತರ ಮಕ್ಕಳು ಹಣ ಕೊಟ್ಟು ಇಂತಹ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಪಡೆಯುತ್ತಾರೆ. ಇದರಿಂದ ವಂಚಿತರಾದ ವಿದ್ಯಾರ್ಥಿಗಳು ಅನಾನುಕೂಲವಿರುವ, ಅಂದರೆ ಗ್ರಂಥಾಲಯ, ಪ್ರಯೋಗಾಲಯ, ಉಪಾಧ್ಯಾಯರ ಕೊರತೆಯಿರುವ ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆದು ಹೆಚ್ಚಿನ ಅಂಕಗಳನ್ನು ಪಡೆಯಲು ಆಗುವುದಿಲ್ಲ. ಆದ್ದರಿಂದ ಇಂತಹ ಶಾಲಾ ಕಲೇಜುಗಳಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಬೇಕು. ಕಷ್ಟಪಟ್ಟು ಓದಿದ ವಿದ್ಯಾರ್ಥಿಗೆ ಇಂದಿನ ಸಮಾಜದಲ್ಲಿ ಉದ್ಯೋಗ ದೊರಕುವುದಿಲ್ಲ. ಅದಕ್ಕೆ ಬದಲು ಲಂಚ ಕೊಟ್ಟು ಉದ್ಯೋಗ ಪಡೆಯುತ್ತಾರೆ ಇಂದಿನ ಶ್ರೀಮಂತರ ಮಕ್ಕಳು. ಬಡತನದಿಂದ ಬಂದ ವಿದ್ಯಾರ್ಥಿಗಳು ನಿರುದ್ಯೋಗ ಸಮಸ್ಯೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನೂ ಇಂದಿನ ಸಮಾಜದಲ್ಲಿ ನೋಡುತ್ತಿದ್ದೇವೆ. ಆದ್ದರಿಂದ ಇಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಬದಲಾವಣೆಗಳನ್ನು ಮಾಡಬೇಕು.

—ನಾಗಲಾಂಬಿಕೆ. ಬಿ. ದ್ವಿತೀಯ ಬಿ.ಕಾಂ.,
ಜೆ.ಎಸ್.ಎಸ್. ಮಹಿಳಾ ಕಾಲೇಜು, ಮೈಸೂರು.

ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅಗತ್ಯವೆಂದು ಹೇಳಲಾಗುವುದಿಲ್ಲ. ಇಂದಿನ ಶಿಕ್ಷಣ ಪದ್ಧತಿ ಇಂದಿನ ಸ್ಥಿತಿಗೆ ಪಕ್ವವಾಗಿದೆ. ಆದರೆ ಶಿಕ್ಷಣ ಕ್ಷೇತ್ರದಲ್ಲಿರುವ ಕೆಲವು ವ್ಯಕ್ತಿಗಳು ಬದಲಾಗಬೇಕು ಅಷ್ಟೆ. ಎಂತಹ ಉತ್ತಮ ಪದ್ಧತಿಯಾದರೂ ವ್ಯಕ್ತಿಗಳು ಸರಿಯಿಲ್ಲದಿದ್ದರೆ ಅದು ಕೆಡುತ್ತದೆ. ಆದ್ದರಿಂದ ನಾವು ಪದ್ಧತಿಯನ್ನೇ ದೂರುವುದು ಸರಿಯಲ್ಲ. ಇರುವ ಶಿಕ್ಷಣ ಪದ್ಧತಿಯನ್ನು ವ್ಯಕ್ತಿಗಳು ದೋಷಪೂರ್ಣಗೊಳಿಸದಂತೆ ಕ್ರಮ ತೆಗೆದುಕೊಳ್ಳಬೇಕು.

—ವಿದ್ಯಾವಿಠ್ಠಲ

> ವಿದ್ಯಾರ್ಥಿಗಳ ಬೌದ್ಧಿಕ ಮಟ್ಟವನ್ನು (*Intelligence Quotient, I.Q*) ಮಾತ್ರ ಅಳೆಯದೆ, ಅವರ ಭಾವನಾ ಮಟ್ಟ (*Emotional Quotient, E.Q*) ಮತ್ತು ಅಧ್ಯಾತ್ಮಮಟ್ಟ (*Spiritual Quotient S.Q*)ಗಳನ್ನೂ ಅಳೆಯುವಂತಾಗಬೇಕು. —NCERT

**ಖಂಡಿತಾ,** ಇಂದಿನ 'ಶಿಕ್ಷಣ' ಪದ್ಧತಿಯಲ್ಲಿ ಬದಲಾವಣೆ ಅತ್ಯಗತ್ಯ. ಏಕೆಂದರೆ 'ಶಿಕ್ಷಣ' ತನ್ನ ನಿಜವಾದ ಅರ್ಥವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ. ಹಿಂದಿನ ಕಾಲದಲ್ಲಿ 'ಶಿಕ್ಷಣ' ಎಂದರೆ ಜ್ಞಾನಾರ್ಜನೆ ಎಂದು ಅರಿತಿದ್ದರು. ಆದರೆ ಕಾಲ ಬದಲಾದಂತೆ ಈಗಿನ ಜನರು ಶಿಕ್ಷಣಕ್ಕೆ ಹೊಸ ಅರ್ಥ ಕಲ್ಪಿಸಿಕೊಟ್ಟಿದ್ದಾರೆ. ತಲೆಗೆ ಹೋಗದಿದ್ದರೂ ಬಾಯಿಪಾಠ ಮಾಡಿ ಬರೆದು ಹೆಚ್ಚಿನ ಅಂಕ ತೆಗೆದುಕೊಂಡವನೇ ಆದರ್ಶ ವಿದ್ಯಾರ್ಥಿ ಎಂಬ ತಪ್ಪು ತಿಳುವಳಿಕೆ ಅವರಲ್ಲಿದೆ. ಈ ತಪ್ಪು ತಿಳುವಳಿಕೆ ಹೋಗಲಾಡಿಸಿ 'ಶಿಕ್ಷಣ'ಕ್ಕೆ ತನ್ನ ನಿಜವಾದ ಅರ್ಥವನ್ನು ಕೊಡಬೇಕು. ಪಠ್ಯಪುಸ್ತಕದ ಜೊತೆಗೆ ಇತರೆ ಚಟುವಟಿಕೆಗಳಲ್ಲಿಯೂ ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು. ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಪ್ರತಿಭೆಗಳನ್ನು ಹೊರತರಬೇಕು. ತಪ್ಪು ದಾರಿಯಲ್ಲಿ ಹೋಗದಂತೆ ಹಾಗೂ ಸನ್ಮಾರ್ಗವನ್ನನುಸರಿಸುವಂತೆ ತಿಳುವಳಿಕೆ ನೀಡಬೇಕು. ವಿದ್ಯೆಯ ಜೊತೆಜೊತೆಗೆ ಧ್ಯಾನ ಮುಂತಾದವುಗಳನ್ನು ಕಲಿಸಿ ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗಬೇಕು. 'ಶಿಕ್ಷಣ' ಪದ್ಧತಿ ವಿದ್ಯಾರ್ಥಿಯನ್ನು ಅಂಧಕಾರದಿಂದ ಬೆಳಕಿನೆಡೆಗೆ ತರುವ ಉಜ್ವಲ ದೀಪವಾಗಬೇಕು ಹಾಗೂ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ನೆರವಾಗಬೇಕು.

—ಭವ್ಯ. ಎಚ್.ಎಸ್., ದ್ವಿತೀಯ ಪಿ.ಯು.ಸಿ,
ಜೆ.ಎಸ್.ಎಸ್. ಮಹಿಳಾ ಕಾಲೇಜು.

೨೧ನೇ ಶತಮಾನದ ಹೊಸ್ತಿಲಿನಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಕ್ಷಿಪ್ರಗತಿಯಲ್ಲಿ ಬದಲಾವಣೆಗಳಾಗುತ್ತಿದ್ದರೂ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಅವಶ್ಯಕತೆಗಳಿಗನುಗುಣವಾಗಿ ಯಾವ ಬದಲಾವಣೆಯೂ ಆಗದಿರುವುದು ಅತ್ಯಂತ ಸೋಜಿಗದ ಸಂಗತಿ. ನಮ್ಮ ಚಾರಿತ್ರ್ಯ ನಿರ್ಮಾಣಕ್ಕೆ ಬುನಾದಿಯನ್ನು ಒದಗಿಸಬೇಕಾಗಿರುವುದು ಶಿಕ್ಷಣ ಸಂಸ್ಥೆಗಳು. ಆದರೆ ಹಾಗಾಗುತ್ತಿದೆಯೇ ಎಂಬುದೇ ಪ್ರಶ್ನೆ. ಇನ್ನೂ ಅಚ್ಚನ್ನು ಪಡೆಯಬೇಕಾದ ಎಳೆಯರಲ್ಲಿ ಸೃಜನಾತ್ಮಕತೆಯನ್ನು ಅರಳಿಸುವ ಶಿಕ್ಷಣ ನಮ್ಮದಾಗಿದೆಯೇ?

ನಿಜವಾಗಿ ಹೇಳಬೇಕೆಂದರೆ ಶಿಕ್ಷಣ ಈಗ ಒಂದು ದೊಡ್ಡ ವ್ಯಾಪಾರವಾಗಿದೆ. ಲಾಭ ಮಾಡುವುದೇ ಉದ್ದೇಶವಾಗಿರುವಾಗ ಯಾರ ಹಿತ ಕಟ್ಟಿಕೊಂಡು ಅವರಿಗೇನು? ಎಲ್ಲ ವಿದ್ಯಾರ್ಥಿಗಳನ್ನೂ ಸನ್ಮಾರ್ಗದಲ್ಲಿ ತರುವ ಗುರುತರವಾದ ಹೊಣೆ ಎಷ್ಟೆಂಬುದು ಶಿಕ್ಷಣ ಅಥವಾ ಬೋಧನೆಯಲ್ಲಿ ವೃತ್ತಿಪಾವಿತ್ರ್ಯದ ಅರಿವಿನಿಂದ ಅದಕ್ಕೆ ಅರ್ಪಿಸಿಕೊಂಡವರಿಗೆ ಮಾತ್ರ ಗೊತ್ತು.

ಆದರೆ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಾದರೋ ಎಲ್ಲವನ್ನೂ ಉರು ಹಚ್ಚಿ ಪರೀಕ್ಷೆಗಳಲ್ಲಿ ಅದನ್ನು ವಾಂತಿ ಮಾಡಿ ಉತ್ತಮ ಅಂಕಗಳನ್ನು ಪಡೆಯುವುದೇ ಆಗಿದೆ! ತಾರ್ಕಿಕವಾಗಿ ವಿಚಾರ ಮಾಡುವುದು, ಪ್ರಾಯೋಗಿಕತೆ, ಕ್ರಿಯಾಶೀಲತೆ, ಏನು, ಹೇಗೆ, ಏಕೆ ಎಂಬವುಗಳನ್ನೆಲ್ಲ ಗಾಳಿಗೆ ತೂರಲಾಗಿದೆ. ಶಾಲೆಯಲ್ಲಿ ಕಲಿಸುವ ಪಾಠಗಳು ಬರೀ ಪರೀಕ್ಷೆಗಳಲ್ಲಿ ವಾಂತಿ ಮಾಡಲು ಯೋಗ್ಯವಾದವುಗಳೇ ಹೊರತು ಬದುಕಿನಲ್ಲಿ ಅವುಗಳಿಗೆ ಯಾವ ಪ್ರಾಯೋಗಿಕ ಬೆಲೆಯೂ ಇಲ್ಲದಂತಾಗಿದೆ. ಪರೀಕ್ಷೆಗಳಾದನಂತರ ಅವುಗಳನ್ನು ನೆನಪಿನಲ್ಲಿಡುವ ಗೋಜಿಗೆ ಹೋಗುವವರಾರು? ಉರು ಹಚ್ಚುವುದೇ ವಿದ್ಯಾರ್ಥಿಗಳ ಕಾಯಕವಾಗಿರುವುದರಿಂದ, 'ಮೊದಲು ಪಠನ, ನಂತರ ಅದನ್ನು ಅರ್ಥೈಸುವುದು, ಅದರ ನಂತರ ಕಲಿಕೆ' ಈ ಹಂತಗಳನ್ನು ಶಾಲೆಯಲ್ಲಿ ಅನುಸರಿಸಲಾಗುತ್ತಿಲ್ಲ.

> ಇಡೀ ಶಿಕ್ಷಣ ಪ್ರಕ್ರಿಯೆ ಹೇಗಿರಬೇಕೆಂದರೆ ಈ ದೇಶದ ಬಾಲಕ ಬಾಲಕಿಯರು ಒಳ್ಳೆಯದನ್ನು ತಿಳಿಯುವಂತಾಗಬೇಕು, ಒಳ್ಳೆಯದನ್ನು ಪ್ರೀತಿಸುವಂತಾಗಬೇಕು, ಒಳ್ಳೆಯದನ್ನು ಮಾಡುವಂತಾಗಬೇಕು ಮತ್ತು ಪರಸ್ಪರ ಸಹನೆಯಿಂದ ಬಾಳುವ ಪ್ರಜೆಗಳಾಗಿ ಅವರು ಬೆಳೆಯುವಂತಾಗಬೇಕು. —NCERT

ನಾಲ್ಕು ಗೋಡೆಗಳ ಮಧ್ಯೆಗೆ ಮಾತ್ರ ಶಿಕ್ಷಣದ ಪ್ರಕ್ರಿಯೆ ಸೀಮಿತವಾದರೆ ವಿದ್ಯಾರ್ಥಿಗಳ ಬೆಳವಣಿಗೆ ಕುಂಠಿತವಾಗುತ್ತದೆ. ಉದಾಹರಣೆಗೆ ಮೀನಿನ ಬಗ್ಗೆ ಹೇಳುತ್ತಾ ಮೀನಿನ ಚಿತ್ರವನ್ನು ನೋಡಿಸುವುದು ಒಂದು ವಿಧಾನ. ಆದರೆ ಹತ್ತಿರದಲ್ಲಿರುವ ಕೊಳದಲ್ಲಿ ಅಥವಾ ಅಕ್ವೇರಿಯಂನಲ್ಲಿ ಅವುಗಳನ್ನು ನೋಡಿಸಿದಾಗ ಆಗುವ ಪರಿಣಾಮವೇ ಬೇರೆ. ಒಂದು ಚಿತ್ರ ಸಾವಿರ ಪದಗಳಿಗೆ ಸಮವಾದರೆ, ಅದರದೇ ಜೀವಂತ ಮಾದರಿ ಎದುರಿಗಿರುವಾಗ ಅದು ಸಾವಿರ ಚಿತ್ರಗಳಿಗೆ ಸಮವಾಗುತ್ತದೆ.

ಕ್ರೀಡೆಗಳಲ್ಲಿ ನಮ್ಮ ಕ್ರೀಡಾಪಟುಗಳು ಪ್ರತಿಬಾರಿಯೂ ಅಂತರ ರಾಷ್ಟ್ರೀಯ ಮಟ್ಟದ ಪಂದ್ಯಗಳಿಂದ ಹ್ಯಾಪುಮೋರೆ ಹಾಕಿಕೊಂಡು ಬರುತ್ತಿದ್ದರೂ ಒಳಾಂಗಣ ಹಾಗೂ ಹೊರಾಂಗಣ ಕ್ರೀಡೆಗಳನ್ನು ಅಧಿಕೃತ ವಿಷಯಗಳಾಗಿ ಬೋಧಿಸುವ ಕಡೆ ಗಮನ ಹರಿಸದಿರುವುದು ಮತ್ತೂ ಸೋಜಿಗದ ಸಂಗತಿ. ಚಿಕ್ಕಂದಿನಿಂದಲೇ ಸಮರ್ಥರಾದ ವಿದ್ಯಾರ್ಥಿಗಳು ಕ್ರೀಡೆಗಳನ್ನು ಐಚ್ಛಿಕ ವಿಷಯಗಳನ್ನಾಗಿ ಸ್ವೀಕರಿಸುವ ಅವಕಾಶವಿರಬೇಕು.

—ರೇಷ್ಮಾ. ಎಸ್., ದ್ವಿತೀಯ ಬಿ.ಸಿ.ಎ.

**ಇಂದಿನ** ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಗಳ ಅಗತ್ಯ ಖಂಡಿತವಾಗಿಯೂ ಇದೆ. ಅದರಲ್ಲೂ ಮುಂದುವರಿಯುತ್ತಿರುವ ಈ ವೈಜ್ಞಾನಿಕ ಪ್ರಪಂಚದಲ್ಲಿ ಶಿಕ್ಷಣ ಪದ್ಧತಿಯಲ್ಲಿನ ಬದಲಾವಣೆ ತೀರಾ ಅಗತ್ಯ ಹಾಗೂ ಅನಿವಾರ್ಯ.

ಶಿಕ್ಷಣ ಪದ್ಧತಿಯಲ್ಲಿ ಮುಖ್ಯವಾಗಿ ನೈತಿಕ ಮೌಲ್ಯಾಧಾರಿತವಾದ, ರಾಷ್ಟ್ರೀಯತೆಯನ್ನು ಬೆಳೆಸುವ, ಅದೇ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಸಂಬಂಧಗಳನ್ನು ಭದ್ರಪಡಿಸುವ ಮೂಲ ಬದಲಾವಣೆಗಳಾಗಬೇಕು. ಜೊತೆಗೆ ಯೋಜನಾಬದ್ಧ ಕಾರ್ಯಕ್ರಮದ ಅಳವಡಿಕೆಯೂ ಶಿಕ್ಷಣಕ್ಷೇತ್ರದಲ್ಲಾಗಬೇಕು.

ನೈತಿಕ ಮೌಲ್ಯಾಧಾರಿತ ಶಿಕ್ಷಣ ಕ್ರಮವೆಂದರೆ ವಿದ್ಯಾರ್ಥಿಗಳಿಗೆ ಆರಂಭದಿಂದಲೇ ಪಠ್ಯಕ್ರಮದಲ್ಲಿ ನೀತಿಯುಕ್ತ ಕಥೆಗಳನ್ನು ಅಳವಡಿಸಿ ಜೀವನದಲ್ಲಿ ಅವುಗಳ ಅಗತ್ಯತೆಯ ಬಗ್ಗೆ ಸರಿಯಾದ ಅರಿವು ಮೂಡಿಸಿ ಆ ವಿದ್ಯಾರ್ಥಿಯನ್ನು ಉತ್ತಮ ಪ್ರಜೆಯನ್ನಾಗಿ ಮಾಡಿದರೆ ಆ ವ್ಯಕ್ತಿ ರಾಷ್ಟ್ರಕ್ಕೆ ಲಾಭದಾಯಕವಾಗಬಲ್ಲನು.

> ವಿಷಯವಸ್ತುವಿನೊಡನೆ ನೇರಸಂಪರ್ಕದಿಂದ ಜ್ಞಾನವನ್ನು ಪಡೆಯುವಂತಾಗಬೇಕು, ಕೇವಲ ಅನುಕರಣೆಯಿಂದಾಗಲಿ, ಕಂಠಪಾಠದಿಂದಾಗಲಿ ಅಲ್ಲ. ಇದೇ ಜ್ಞಾನ ನಿರ್ಮಾಣದ ಮೂಲತತ್ತ್ವ.
>
> NCERT

ರಾಷ್ಟ್ರೀಯತೆಯನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡಿಸುವ ಶಿಕ್ಷಣ ಅಗತ್ಯ. ಅದಕ್ಕಾಗಿ ಅಳಿದುಹೋದ ನಮ್ಮ ರಾಷ್ಟ್ರನಾಯಕರ ವೀರಗಾಥೆಗಳು, ಅವರ ರಾಷ್ಟ್ರಪ್ರೇಮ, ಅರ್ಪಣಾ ಮನೋಭಾವಗಳ ವಾಸ್ತವಿಕ ಚಿತ್ರಣ ನೀಡುವ ಪರಿಣಾಮಕಾರಿಯಾದ ಶಿಕ್ಷಣ ಅಗತ್ಯವಿದೆ. ಆದರೆ ರಾಷ್ಟ್ರೀಯತೆಯ ಬೆಳವಣಿಗೆಯು ವಿಶ್ವರಾಜಕಾರಣಕ್ಕೆ ಧಕ್ಕೆ ಉಂಟುಮಾಡಬಾರದು. ಅಂದರೆ ಶಿಕ್ಷಣವು ಅಂಥ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಗಬಾರದು. ಇಂತಹ ಮಾರಕ ಬೆಳವಣಿಗೆಗಳು ಮಾನವ ಕೋಟಿಯ ಅಸ್ತಿತ್ವಕ್ಕೆ ಸವಾಲಾಗುತ್ತವೆ ಎಂಬುದನ್ನು ಹಿಂದೆ ಸಂಭವಿಸಿದ ಎರಡು ಮಹಾಯುದ್ಧಗಳಿಂದ ಅರಿತಿದ್ದೇವೆ. ಇಲ್ಲಿ ಒಬ್ಬ ರಾಜ್ಯಶಾಸ್ತ್ರಜ್ಞರ ಉಕ್ತಿ ಉಲ್ಲೇಖಾರ್ಹ: 'ಒಂದು ವೇಳೆ ಮೂರನೇ ಮಹಾಯುದ್ಧವೇನಾದರೂ ಸಂಭವಿಸಿದರೆ ನಾಲ್ಕನೇ ಮಹಾಯುದ್ಧ ಕಲ್ಲು ಕೋಲುಗಳ ಮೂಲಕ ನಡೆಯಬೇಕಾಗುತ್ತದೆ.'

ವೃತ್ತಿಶಿಕ್ಷಣದ ಬಗ್ಗೆ ಸ್ವಲ್ಪ ಗಮನ ನೀಡುವ ಅಗತ್ಯವಿದೆ. ಏಕೆಂದರೆ ನಾವು ಕಲಿಯುವ ಶಿಕ್ಷಣದಿಂದ ನಮ್ಮ ಬದುಕಿನ ವಾಸ್ತವಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಅಗತ್ಯವಾದ ಸಾಮರ್ಥ್ಯವನ್ನು ಪಡೆಯಬೇಕು. ನಾವು ಕಲಿಯುತ್ತಿರುವ ಶಿಕ್ಷಣ ಮತ್ತು ಪಡೆಯುವ ಉದ್ಯೋಗದ ಆವಶ್ಯಕತೆಗಳ ನಡುವೆ ಸಮನ್ವಯ ಇರುವುದಿಲ್ಲ.

ಯಾವುದೇ ಶಿಕ್ಷಣದಲ್ಲಿ ನಿರತರಾದ ವಿದ್ಯಾರ್ಥಿಗಳು ನಮ್ಮ ಸಂವಿಧಾನ, ಕಾನೂನು ಇವುಗಳ ಬಗ್ಗೆ ಪ್ರಾಥಮಿಕ ಜ್ಞಾನವನ್ನು ರೂಢಿಸಿಕೊಳ್ಳುವ ಶಿಕ್ಷಣ ಪದ್ಧತಿ ಆವಶ್ಯಕ.

ಮಕ್ಕಳು ಅಥವಾ ಪ್ರಜೆಗಳಿಗೆ ಶಿಕ್ಷಣ ನೀಡುವುದು ಸರ್ಕಾರದ ಮೊದಲನೇ ಆದ್ಯತೆಯಾಗಿ ಕಾರ್ಯಗತ ಗೊಳ್ಳಬೇಕು. ಶಿಕ್ಷಣವೇ ಅಭಿವೃದ್ಧಿಗೆ ಮೂಲ ಎನ್ನುವ ನಾವು ಶಿಕ್ಷಣಕ್ಕೆ ನೀಡಿರುವುದು ಕೊನೆಯ ಆದ್ಯತೆ ಎಂಬುದು ತಿಳಿದ ವಿಷಯವಾಗಿದೆ. ಕರ್ನಾಟಕದ ಶಿಕ್ಷಣ ಸಚಿವರೊಬ್ಬರು 'ಶಿಕ್ಷಣ ಕ್ಷೇತ್ರವು ಅನುತ್ಪಾದಕ ಕ್ಷೇತ್ರ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದು ವಿಷಾದನೀಯ.

ಪ್ರಾಥಮಿಕ ಶಾಲಾ ಶಿಕ್ಷಕರನ್ನು ಆಯ್ಕೆ ಮಾಡುವಾಗ ಯಾವುದೇ ಪ್ರಭಾವಕ್ಕೊಳಪಡದೇ ಪ್ರತಿಭಾವಂತರನ್ನು ಹಾಗೂ ಶಿಕ್ಷಕ ವೃತ್ತಿಯ ಬಗ್ಗೆ ಆಸಕ್ತಿ ಇರುವವರನ್ನು ಮಾತ್ರ ಆಯ್ಕೆ ಮಾಡುವುದು ಶ್ರೇಯಸ್ಕರ. ಕಾಲೇಜು ಶಿಕ್ಷಕರ ವೇತನಕ್ಕೆ ಸಮನಾದ ಶಿಕ್ಷಣವನ್ನು ಅವರಿಗೆ ನೀಡಬೇಕು. ಪ್ರೌಢಶಾಲಾ ಶಿಕ್ಷಣದಲ್ಲಿ ಲೈಂಗಿಕ ಶಿಕ್ಷಣ ನೀಡುವುದು ಅಗತ್ಯ. ಶಿಕ್ಷಕ ವೃತ್ತಿಗೆ ಹೆಚ್ಚಿನ ಸಂಖ್ಯೆಯ ಮಹಿಳೆಯರ ನೇಮಕಾತಿ ಅಗತ್ಯ. ಅಲ್ಲದೇ ದೈಹಿಕ ಶಿಕ್ಷಣಕ್ಕೂ ಹೆಚ್ಚಿನ ಆದ್ಯತೆ ನೀಡುವುದು ಅಗತ್ಯ.

ಒಟ್ಟಿನಲ್ಲಿ ಈ ಮೇಲಿನ ಎಲ್ಲಾ ಬದಲಾವಣೆಗಳನ್ನು ಶಿಕ್ಷಣ ಪದ್ಧತಿಯಲ್ಲಿ ಕ್ರಿಯಾತ್ಮಕವಾಗಿ ಜಾರಿಗೆ ತಂದು ಅದು ಯಶಸ್ವಿಯಾಗುವಂತೆ ಮಾಡಿದಲ್ಲಿ ಭಾರತದಂತಹ ಪ್ರಬಲ ಹಾಗೂ ಶಕ್ತಿಯುತ ರಾಷ್ಟ್ರ ಬೇರೊಂದಿರುವುದಿಲ್ಲ.

—ಪ್ರತಿಭಾ. ಬಿ.ಎಸ್.,
ತೃತೀಯ ಬಿ.ಎ., ಮಹಾರಾಣಿ ಕಾಲೇಜು.

ಹೌದು. ಶಿಕ್ಷಣದ ಒಂದು ಅವಿಭಾಜ್ಯ ಅಂಗ ಶಿಕ್ಷಕ. ಶಿಕ್ಷಕರು ಇಂದು ಪಾಠ ಬೋಧಿಸುವ ಯಂತ್ರಗಳಾಗಿದ್ದಾರೆ. ಅವರು ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಯ ಕಡೆ, ಅವರು ಎದುರಿಸುವ ಮಾನಸಿಕ ಸಮಸ್ಯೆಗಳ ಕಡೆ ಅಂದರೆ E.Q. (Emotional Quotient) ಕಡೆಯೂ ಗಮನ ಹರಿಸುವಂತಾಗಬೇಕು. ಹಿಂದಿನ ನಮ್ಮ ಗುರುಕುಲ ಪದ್ಧತಿಯಲ್ಲಿ ಇದು ಸ್ವಾಭಾವಿಕವಾಗಿತ್ತು. ಇಂದು ಆ ಪದ್ಧತಿ ಸ್ವಲ್ಪ ಮಟ್ಟಿಗಾದರೂ ಬಂದರೆ ಶಿಕ್ಷಕರಿಗೆ ಸಲ್ಲಬೇಕಾದ ಗೌರವ, ಕೃತಜ್ಞತೆ, ಸ್ಥಾನ ಮಾನಗಳು ದೊರಕಿದಂತಾಗುತ್ತವೆ.

—ವಿಜಯ್ ಅರಸ್. ಆರ್. ಎಸ್., ತೃತೀಯ ಬಿ.ಕಾಂ.,
ಮಹಾಜನ ಕಾಲೇಜು.